(SRI S. NIJALINGAPPA)

(*b*) The Board have already taken steps to place bulk orders for supply of the materials required for servicing the I. P. Sets on top priority basis.

(*c*) The Government have prohibited the use of electrical energy for the purpose of advertisement, commercial or otherwise, and exterior illuminations including Neon-signs and flood lights.

(*d*) About 500 Kws.

(*e*) No

(*f*) The various measures taken are as follows:—

(i) Weekly holidays for different Groups of H. T. Consumers have been declared on different days of the week,

(ii) Power supply has been cut to H.T. installations during peak hours between 6 P.M. and 9 P.M.,

(iii) Staggering of power supply in rural areas for L. T. and medium consumers has been introduced. These and other measures taken already have helped to secure the equitable distribution of available electrical energy.

Sri S. S. KOLKEBAIL.—May I know the date on which the Electricity Board placed bulk orders for supply of materials and I. P. Sets and whether they have been received in time and if not the extent of delay ?

†Sri S. NIJALINGAPPA.—It is very difficult to say that. Every attempt is being made to get them as early as possible and as large a quantity as possible.

Sri S. S. KOLKEBAIL.—Are the Government aware that inspite of much advertisement and much talk of liberal scheme of supply of electricity, rural electrification is not done at all as required by the Government ?

Sri S. NIJALINGAPPA.—I am sorry, my friend is exaggerating the problem by saying that nothing is being done. I think during the last one year much more has been done than what has been done during the last five years. Unfortunately, the limiting factors are want of necessary materials and immediately they are forthcoming, we are extending it. Now this year, we have in view to extend 6000 miles of power lines.

Sri K. LAKKAPPA.—It is not a fact that due to failure of supply of electricity to irrigation wells, the machinery is lying idle ?

Sri S. NIJALINGAPPA:—Some of the pumpsets are idle;

---

## Extent of Reserve Forest and Revenue Forest Land in South Kanara District.

*Q.—367. Sri S. SUBBAYYA NAIK (Sullia).—

Will the Government be pleased to state:—

(*a*) the extent of Reserve Forest and Revenue Forest land in South Kanara District (Talukwise figures may be furnished);

---

†Indicates that the remarks or speeches have not been revised by the member concerend

(*b*) out of the Revenue land (A.W. land), the extent of land improved and cultivated (Talukwise information may be furnished);

(*c*) whether lands have been encroached unauthorisedly in these areas and if so, since how many years the lands have been encroached?

*A*.—Sri B. RACHAIAH (Minister for Forest and Fisheries).—

(*a*) *Vide* Statement I given below.

(*b*) *Vide* Statement II given below.

(*c*) Yes.
Not possible to assess.

STATEMENT I

| Sl. No. | Name of Taluk | Reserve Forests in acres | Revenue Forest in acres |
|---|---|---|---|
| 1. | Coondapur ... | 1,27,382.70 | 1,35,670.00 |
| 2. | Udupi ... | 924.00 | 3620.00 |
| 3. | Karkal ... | 79,825.57 | 1 27,911.13 |
| 4. | Belthangady ... | 1,08,051.31 | 1,85,441.39 |
| 5. | Puttur ... | 1,71,003.89 | 1,77,315.24 |
| 6. | Buntwal .. | 4.119.13 | 18,191.55 |
| 7. | Mangalore ... | ... | 49,450.69 |
| | Total ... | 4,91,306.60 | 6,97,600.00 |

STATEMENT II

| Sl. No. | Name of Taluk | Extent of land improved and cultivated in acres |
|---|---|---|
| 1. | Bantwal ... ... | 852'95 |
| 2. | Belthangadi ... ... | 3,956'00 |
| 3. | Coondapur ... ... | 2,8:0'85 |
| 4. | Karkal ... ... | 942'08 |
| 5. | Mangalore ... ... | 215'00 |
| 6. | Puttur ... ... | 10,801'30 |
| 7. | Udipi ... ... | 265'00 |
| | Total ... | 19,843'18 |

ಶ್ರೀ ಎಸ್. ಸುಬ್ಬಯ್ಯನಾಯಕ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೆಳ್ತಂಗಡಿ, ಪುತ್ತೂರು ಮತ್ತು ಕುಂದಾಪುರ ಈ ತಾಲ್ಲೂಕುಗಳಲ್ಲಿರುವ ರೆವಿನ್ಯೂ ಫಾರೆಸ್ಟ್ ಭೂಮಿಯನ್ನು ದರಕಾಸ್ತು ಕೊಡಲಿಕ್ಕೆ ಅನುಕೂಲ ಮಾಡಿಕೊಡುತ್ತೀರಾ ?

†ಶ್ರೀ ಬಿ. ರಾಚಯ್ಯ.—ಆ ಬಗ್ಗೆ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಅದರಲ್ಲಿ ರೆವಿನ್ಯೂ ಸಬ್ ಡಿವಿಜನ್ ಆಫೀಸರು, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು, ತಾಲ್ಲೂಕು ಬೋರ್ಡು ಫೀರ್ಮನ್ ಮತ್ತು ಎಕ್ಸೈಜ್ ಆಫೀಸರು ಅನಿಮಲ್ ಹಜ್ಬೆಂಡರಿ ಆಫೀಸರು ಇವರುಗಳು ಇದ್ದಾರೆ. ಇವರುಗಳೆಲ್ಲರೂ ಸೇರಿ ಸಾಗುವಳಿಗೆ ಲಗತ್ತಾಗಿರತಕ್ಕ ಯಾವ ಭೂಮಿಯನ್ನು ರಿಜರ್ವ್ ಫಾರೆಸ್ಟಿನಿಂದ ಟ್ರಾನ್ಸ್‌ಫರ್ ಮಾಡುವುದಕ್ಕೆ ಸಾಧ್ಯವಿದೆ ಎಂಬ ಬಗ್ಗೆ ಒಂದು ವರದಿಯನ್ನು ಸಲ್ಲಿಸ ಬೇಕೆಂದು ಸರ್ಕಾರದವರು ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಈಗ ತಾಲ್ಲೂಕುವಾರು ಮಾಡಿರತಕ್ಕ ಸಮಿತಿಗಳಲ್ಲಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರುಗಳು ಮತ್ತು ಅಧಿಕಾರಿಗಳು ಇರುವುದರಿಂದ ಈ ಸಭೆಯ ಮಾನ್ಯ ಸದಸ್ಯರುಗಳ, ನ್ನೊಳಗೊಂಡ ಒಂದು ಸಮಿತಿಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಆ ಕೆಲಸ ಬೇಗ ಆಗಬೇಕು ; ಅಂಕಿ ಅಂಶಗಳನ್ನು ಸರಿಯಾಗಿ ಒದಗಿಸ ಬೇಕು ಎನ್ನುವ ದೃಷ್ಟಿಯಿಂದ ಆ ಸಮಿತಿಗಳಲ್ಲಿ ತಾಲ್ಲೂಕು ಬೋರ್ಡ್ ಚೇರ್ಮನ್ ಇರುವುದು ಸರಿ ಎಂದು ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದೆ.

ಶ್ರೀ ಕೆ. ಲಕ್ಕಪ್ಪ.—ಆ ಸಮಿತಿಗಳಲ್ಲಿ ಶಾಸನ ಸಭಾ ಸದಸ್ಯರು ಇರಬಾರದು ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ಬಿ. ರಾಚಯ್ಯ.—ಯಾವ ಯಾವ ಸಂದರ್ಭದಲ್ಲಿ ಅವರನ್ನು ಉಪಯೋಗಿಸಿಕೊಳ್ಳಬೇಕೋ ಆ ಸಂದರ್ಭದಲ್ಲಿ ಅವರನ್ನು ಉಪಯೋಗಿಸಿಕೊಳ್ಳುತ್ತೇವೆ. ಇಲ್ಲಿ ಅವರ ಅವಶ್ಯಕತೆಯಿಲ್ಲ, ಆದ್ದರಿಂದ ಇಲ್ಲಿ ಅವರನ್ನು ಸೇರಿಸಿಕೊಂಡಿಲ್ಲ.

Sri A. KRISHNA SHETTY.—With reference to reply to (*c*) may I know why it is not possible to assess encroached lands ?

Sri B. RACHAIAH.—It has been assessed. 3033 acres 35 guntas have been under unauthorised encroachment.

ಶ್ರೀ ಎಚ್. ಆರ್. ಕೇಶವಮೂರ್ತಿ.—ತಾಲ್ಲೂಕು ಬೋರ್ಡು ಪ್ರೆಸಿಡೆಂಟರುಗಳನ್ನು ಈ ಸಮಿತಿಗಳಲ್ಲಿ ತಾವು ನೇಮಕ ಮಾಡಿಕೊಂಡಿದ್ದೇವೆಂದು ಹೇಳಿದಿರಿ, ಹಾಗಾದರೆ ಅವರು ಈ ಸಭೆಯ ಮಾನ್ಯ ಸದಸ್ಯರಿಗಿಂತಲೂ ಹೆಚ್ಚು ಅಂಕಿ ಅಂಶಗಳನ್ನು ಒದಗಿಸುತ್ತಾರೆಂದು ತಮ್ಮ ಭಾವನೆಯೇ ?

ಶ್ರೀ ಬಿ. ರಾಚಯ್ಯ.—ತಾಲ್ಲೂಕು ಬೋರ್ಡಿನಲ್ಲಿ ಜೀಪು ಇರುತ್ತದೆ, ಅಧಿಕಾರಿಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋಗಬೇಕಾದರೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಅವರನ್ನು ಈ ಸಮಿತಿಗಳಲ್ಲಿ ನೇಮಕ ಮಾಡಿದ್ದೇವೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ತಾಲ್ಲೂಕು ಬೋರ್ಡು ಪ್ರೆಸಿಡೆಂಟರು ಯಾವುದಾದರೂ ಆಧಾರದ ಮೇಲೆ ಆ ಲಿಸ್ಟ್‌ಅನ್ನು ತಯಾರು ಮಾಡುತ್ತಾರೆಯೋ ಅಥವಾ ಸ್ವಂತ ಅನುಭವದಿಂದ ಲಿಸ್ಟನ್ನು ತಯಾರು ಮಾಡುತ್ತಾರೆಯೋ ?

ಶ್ರೀ ಬಿ. ರಾಚಯ್ಯ.—ಅಧಿಕಾರಿಗಳು ಇರುತ್ತಾರೆ, ಇಂತಿಂಥಾ ಸರ್ವೆನಂಬರಿನಲ್ಲಿ ರೆವಿನ್ಯೂ ಲ್ಯಾಂಡ್ ಇದೆ, ಇಂತಿಂಥಾ ಸರ್ವೆನಂಬರಿನಲ್ಲಿ ಫಾರೆಸ್ಟ್ ಲ್ಯಾಂಡ್ ಇದೆ, ಅದು ನೀರಾವರಿಯಾಗು ವುದಕ್ಕೆ ಲಗತ್ತಾಗಿದೆ ಎಂದು ಹೇಳುತ್ತಾರೆ. National policyಯನ್ನು, ಗಮನದಲ್ಲಿರಿಸಿ, ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ. ಮತ್ತು ಫಾರೆಸ್ಟ್ ಇಲಾಖೆಯ ಅಧಿಕಾರಿಗಳು ಕೆಲವು ಅಂಕಿ ಅಂಶಗಳನ್ನು ಒದಗಿಸುತ್ತಾರೆ, ಇವುಗಳನ್ನೆಲ್ಲಾ ನೋಡಿ ಅವರು ಶಿಫಾರಸ್ಸು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

Sri A. KRISHNA SHETTY.—Is it not a fact that a majority of the persons who have encroached upon lands are from outside the District in South Kanara ?

Sri B. RACHAIAH.—That information is not available.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಆ ಸಮಿತಿಯಲ್ಲಿ ಎಂ. ಎಲ್. ಎ.ಗಳನ್ನು ಸೇರಿಸಿಕೊಳ್ಳುವ ಆಲೋಚನೆಯನ್ನು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಹೆಚ್ಚಿಗೆ ಜನಗಳನ್ನು ನೇರಿಸಿಕೊಳ್ಳುವುದರಿಂದ ಕೆಲಸ ಬೇಗ ಆಗುವ ಭಾವನೆಯಿಲ್ಲ.

ಶ್ರೀ ಎಸ್. ಸುಬ್ಬಯ್ಯನಾಯಕ್.—ರಿಜರ್ವ್ ಫಾರೆಸ್ಟಿನಲ್ಲಿ ಕೃಷಿಗೆ ಯೋಗ್ಯವಾದ ಜಮೀನನ್ನು ದರಕಾನ್ತು ಮೂಲಕ ರೈತರಿಗೆ ಕೊಡುತ್ತೇವೆಂದು ಹೇಳುತ್ತೀರಿ, ಅದೇ ರೀತಿ ಕೃಷಿಗೆ ಯೋಗ್ಯವಾದ ರೆವಿನ್ಯೂ ಫಾರೆಸ್ಟ್ ಲ್ಯಾಂಡನ್ನೂ ರೈತರಿಗೆ ಕೊಡುವುದಕ್ಕೆ ಏತಕ್ಕೆ ಮನಸ್ಸು ಮಾಡಬಾರದು ? ಮತ್ತು ಸೌತ್ ಕೆನರಾದಲ್ಲಿ ರೆವಿನ್ಯೂ ಫಾರೆಸ್ಟ್ ಲ್ಯಾಂಡನ್ನು ರೈತರಿಗೆ ಕೊಡದೆ ಇರುವುದರಿಂದ ಅಲ್ಲಿ ತುಂಬಾ ದರಕಾನ್ತು ಅರ್ಜಿಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಆ ರೀತಿ ದರಕಾನ್ತು ಅರ್ಜಿಗಳು ಬರುತ್ತಿರುವುದರಿಂದ ಅವುಗಳನ್ನು ಆದಷ್ಟು ಬೇಗ ಪರಿಹಾರ ಮಾಡಬೇಕೆಂದು ಸರ್ಕಾರದವರು ಆ ಬಗ್ಗೆ ಒಂದು ಸಮಿತಿಯನ್ನು ನೇಮಿಸಿದ್ದಾರೆ. ಅವರ ವರದಿ ಬಂದನಂತರ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾಲ್ಲೂಕು ಬೋರ್ಡಿನಲ್ಲಿ ಜೀಪು ಇರುತ್ತದೆ, ಅವರು ಯಾರನ್ನು ಬೇಕಾದರೂ ಅದರಲ್ಲಿ ಕರೆದುಕೊಂಡು ಹೋಗುತ್ತಾರೆ. ಆ ಸಮಿತಿಗಳಲ್ಲಿ ಎಂ.ಎಲ್.ಎ. ಗಳನ್ನು ನೇಮಕ ಮಾಡಿಕೊಂಡು ಅವರೇನಾದರೂ ಆ ಜೀಪಿನಲ್ಲಿ ಕುಳಿತುಕೊಂಡರೆ ಜೀಪಿಗೆ ಭಾರ ಜಾಸ್ತಿಯಾಗುತ್ತದೆಯೇ ? ನಾವು ಬೇಕಾದರೆ ಬಾಡಿಗೆ ಕೊಟ್ಟು ಜೀಪು ತರುತ್ತೇವೆ.

(ಉತ್ತರವಿಲ್ಲ)

ಶ್ರೀ ಎಸ್. ಸುಬ್ಬಯ್ಯನಾಯಕ್.—ಮಲೆನಾಡಿನಲ್ಲಿ ರೆವಿನ್ಯೂ ಲ್ಯಾಂಡ್ ಬಹಳ ಕಡಮೆ ಇದೆಯೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಬಿ. ರಾಚಯ್ಯ.—ಅಲ್ಲಿ ಖಾನಾಸ್ ಲ್ಯಾಂಡ್ ಎಂದು ಇದೆ, ರೆವಿನ್ಯೂ ಲ್ಯಾಂಡ್ ಇದೆ, ಮತ್ತು ಇನ್ನೂ ಕೆಲವು ವೆರೈಟಿಯ ಭೂಮಿ ಇದೆ, ಅಲ್ಲಿ ಯಾವು ಯಾವುದು ಎಷ್ಟೆಷ್ಟು ಇದೆ ಎಂಬುದನ್ನು ನೋಡಿ ಆಮೇಲೆ ಆ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಆ ವಿವರ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗಾಗಲೇ ಯಾವ ಯಾವ ಜಿಲ್ಲೆಗಳ ಸಂಬಂಧವಾಗಿ ಆ ಸಮಿತಿಯ ವರದಿಗಳು ಬಂದಿವೆ ಆ ವರದಿಯ ಪ್ರಕಾರ ಸರ್ಕಾರದವರು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ಜಮೀನನ್ನು ಮುಳುಗಡೆಯಾಗಿರುವ ಪ್ರದೇಶದಲ್ಲಿ ಏನು ಸಮಿತಿಯನ್ನು ನೇಮಕ ಮಾಡಿದ್ದೆವೋ ಆ ಸಮಿತಿಯವರು ಕೊಟ್ಟಿರುವ ವರದಿಯ ಮೇಲೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಬೇರೆ ಕಡೆಯಿಂದ ವರದಿಗಳು ಬಂದಿಲ್ಲ.

Sri A. KRISHNA SHETTY.—Is it not a fact that timber worth several lakhs of rupees has been distroyed and taken on account of encroachment ?

Sri B. RACHAIAH.—To a certain extent, it is true.

ಶ್ರೀ ಕೆ. ಲಕ್ಕಪ್ಪ.—ದೇಶದಾದ್ಯಂತ ತಾಲ್ಲೂಕು ಬೋರ್ಡು ಪ್ರೆಸಿಡೆಂಟರು ಕಾಂಗ್ರೆಸ್ ಪಕ್ಷದವರೇ ಜಾಸ್ತಿ ಇರುವುದರಿಂದ ತಾವು ಆ ಸಮಿತಿಯಲ್ಲಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರನ್ನು ಸೇರಿಸಿರುವುದು ?

ಶ್ರೀ ಬಿ. ರಾಚಯ್ಯ.—ಶಾಸನ ಸಭೆಗಳಲ್ಲಿ ಕೂಡ ಕಾಂಗ್ರೆಸ್ ಸದಸ್ಯರೇ ಹೆಚ್ಚಾಗಿದ್ದಾರೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಜಮೀನನ್ನು ಮುಳುಗಡೆಯಾಗಿರತಕ್ಕ ಪ್ರದೇಶದಲ್ಲಿ ಸರ್ಕಾರದವರು ನೇಮಕ ಮಾಡಿರತಕ್ಕ ಸಮಿತಿಯವರು ಕಾರ್ಯಚಟುವಟಿಕೆಗಳನ್ನು ಮಾಡುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ನಿನ್ನೆ ದಿವಸ 542ನೆಯ ಪ್ರಶ್ನೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಶ್ರೀಮಾನ್ ಪರಮೇಶ್ವರಪ್ಪನವರ ಉಪ ಪ್ರಶ್ನೆಗೆ ಉತ್ತರವನ್ನು ಹೇಳಿದ್ದೇನೆ. ಜಮೀನನ್ನು ಮುಳುಗಡೆಯಾದವರಿಗೆ ಈಗಾಗಲೇ ರೆವಿನ್ಯೂ ಫಾರೆಸ್ಟಿನಲ್ಲಿ 12 ಸಾವಿರ ಎಕರೆ ಜಮೀನನ್ನು ಕೊಟ್ಟಿದ್ದೇವೆ. 9 ಸಾವಿರ ಎಕರೆ ಜಮೀನನ್ನು ರಿಜರ್ವ್ ಫಾರೆಸ್ಟಿನಿಂದ ರಿಲೀಜ್ ಮಾಡಿದ್ದೇವೆ.